ಇ) ಪ್ರವೇಶ ತೆರಿಗೆ ಕಳೆದ 3 ವರ್ಷಗಳಲ್ಲಿ ಒಂದು ಬಾರಿ ಏರಿಕೆಯಾಗಿದೆ. ಪ್ರವೇಶ ತೆರಿಗೆ ವಸೂಲಾತಿ ಜವಾಬ್ದಾರಿಯನ್ನು ಮೆ।। ಕರ್ನಾಟಕ ಕಮರ್ಷಿಯಲ್ ಅಂಡ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಲಿ., ಬೆಂಗಳೂರು, ಇವರ ಬಿಡ್ ಮೊತ್ತವಾದ ರೂ 1.55 ಕೋಟಿಗಳಿಗೆ ಮಹಿಸಲಾಗಿತ್ತು. ಸರ್ಕಾರದ ಆದೇಶದಂತೆ ದಿನಾಂಕ:30-10-2000 ರಿಂದ ಅಡ್ ಹಾಕ್ ಆಧಾರದ ಮೇಲೆ ಶೇ. 75:25 ಅನುಪಾತದಲ್ಲಿ (ಸರ್ಕಾರಕ್ಕೆ ಶೇ. 75 ಭಾಗ ಮತ್ತು ಸಂಸ್ಥೆಯವರಿಗೆ ಶೇ. 25 ಭಾಗ) ಸದರಿ ಸಂಸ್ಥೆಯವರಿಂದಲೇ ವಸೂಲಾತಿಯನ್ನು ಮುಂದುವರಿಸಲಾಗಿದೆ ಈಗ ಸರ್ಕಾರವು ವಸೂಲಾತಿಯ ಹಕ್ಕನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವಾರ್ಷಿಕ ರೂ. 3.20 ಕೋಟಿ ಗಳಿಗೆ ನೀಡಲಾಗಿದ್ದು, ಸದರಿ ಸಂಸ್ಥೆಯವರು ಕರಾರು ಮಾಡಿಕೊಳ್ಳಬೇಕಾಗಿದೆ.

ಈ) ಬೃಂದಾವನದಲ್ಲಿ ಕೆಟ್ಟಿರುವ ವಿದ್ಯುತ್ ದೀಪಗಳನ್ನು ಮತ್ತು ನೀರಿನ ಕಾರಂಜಿಗಳನ್ನು ದುರಸ್ಥಿ ಮಾಡಲಾಗಿದ್ದು, ಕುಡಿಯುವ ನೀರಿನ ಮತ್ತು ಶೌಚಾಲಯಗಳ ದುರಸ್ಥಿ ಕೈಗೊಳ್ಳಲಾಗಿರುತ್ತದೆ. ವಾಹನ ತಂಗುದಾಣಕ್ಕಾಗಿ ವಿವಿಧ ಸ್ಥಳಗಳಲ್ಲಿ ಅನುಕೂಲ ಮಾಡಲಾಗಿದೆ. ಕಳೆದ 3 ವರ್ಷಗಳಲ್ಲಿ ಇದಕ್ಕಾಗಿ ರೂ. 150.00 ಲಕ್ಷ ವೆಚ್ಚ ಮಾಡಲಾಗಿದೆ.

ಉ) ಇಲ್ಲಿ ವಿದ್ಯುದೀಕರಣ ಸಮಸ್ಯೆ ಆಗಾಗ್ಗೆ ಉದ್ಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಮಸ್ಯೆ ವಿದ್ಯುತ್ ಕಡಿತದಿಂದ ಹಾಗೂ ಯಾವಾಗಲಾದರೊಮ್ಮೆ ತಾಂತ್ರಿಕ ದೋಷದಿಂದ ಉಂಟಾಗಿರುವ ಸಂದರ್ಭದಲ್ಲಿ ಇದನ್ನು ಸರಿಪಡಿಸಲಾಗುತ್ತಿರುತ್ತದೆ.

ಮೈಸೂರು ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಯೋಜನೆ

154(247) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಸ್ತ್ರೀಶಕ್ತಿ ಯೋಜನೆ ಕೇಂದ್ರಗಳ ವಿವರಗಳನ್ನು ತಿಳಿಸುವುದು.

ಆ) ಈ ಯೋಜನೆಯು ಪರಿಣಾಮಕಾರಿಯಾಗಿ ಜಾರಿಯಾಗುವಂತಾಗಲು ಸರ್ಕಾ7ರ ಯಾವ ಯಾವ ಕ್ರಮ ಕೈಗೊಳ್ಳುವುದು.

ಇ) ಈ ಯೋಜನೆಯು ಪರಿಣಾಮಕಾರಿಯಾಗಿ ಜಾರಿಯಾಗುವಂತಾಗಲು ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳುವುದು.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ನಗರ ಪ್ರದೇಶಗಳಲ್ಲಿ ಸ್ತ್ರೀಶಕ್ತಿಯೋಜನೆಯು ಜಾರಿಯಲ್ಲಿರುವುದಿಲ್ಲ.

ಆ) ಸ್ತ್ರೀಶಕ್ತಿ ಯೋಜನೆಯಡಿ ಮೇ: 2002ರ ಅಂತ್ಯಕ್ಕೆ 75660 ಸ್ವಸಹಾಯ ಗುಂಪುಗಳು ರಚಿಯಾಗಿದ್ದು, ಒಟ್ಟು 1104282 ಮಹಿಳಾ ಸದಸ್ಯರು 7358.70 ಲಕ್ಷ ರೂ.ಗಳನ್ನು ಉಳಿತಾಯ ಮಾಡಿರುತ್ತಾರೆ. ಒಟ್ಟು 3795 ಗುಂಪುಗಳಿಗೆ 756.99 ಲಕ್ಷ ರೂ.ಮೊತ್ತದ ಸಾಲವನ್ನು ಬ್ಯಾಂಕುಗಳಿಂದ ಪಡೆದಿರುತ್ತಾರೆ. 2001-02ನೇ ಸಾಲಿನಲ್ಲಿ 11114 ಗುಂಪುಗಳಿಗೆ 555.70 ರೂ.ಗಳ ಸುತ್ತುನಿಧಿಯನ್ನು ನೀಡಲಾಗಿದೆ.

ಇ) 2002-03ರ ಸಾಲಿನಲ್ಲಿ ಗುಂಪುಗಳ ಬಲವರ್ಧನೆಗಾಗಿ ಗುಂಪಿನ ಸದಸ್ಯರುಗಳಿಗೆ ಆದಾಯೋತ್ಪನ್ನ ಚಟುವಟಿಕೆ, ಸಾಲ ನಿರ್ವಹಣೆ, ವ್ಯಾಪರ ಅವಕಾಶಗಳು ಹಾಗೂ ಸಾಮಾಜಿಕ ಪಿಡುಗುಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 13160 ಗುಂಪುಗಳಿಗೆ ತಲಾ 5000 ರೂ. ನಂತೆ ಸುತ್ತುನಿಧಿ ನೀಡಲಾಗುವುದು. ಗುಂಪುಗಳ ಆದಾಯೋತ್ಪನ್ನ ಚಟುವಟಿಕೆಗಳಿಗೆ ಬ್ಯಾಂಕುಗಳಿಂದ ಸಾಲ ದೊರೆಯುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

2002-03ರ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಗಾಗಿ 1242.50 ಲಕ್ಷ ರೂ.ಗಳ ಆಯವ್ಯಯವನ್ನು ನಿಗದಿಪಡಿಸಲಾಗಿದೆ.

ಎ.ಪಿ.ಎಂ.ಸಿ. ಯಲ್ಲಿನ ಮೂಲಭೂತ ಸೌಕರ್ಯಗಳು

155(248) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಬಂಡೀಪಾಳ್ಯದ ಎ.ಪಿ.ಎಂ.ಸಿ. ಯಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳ ವಿವರ ನೀಡುವುದು;

ಆ) ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಇಲ್ಲಿಗೆ ವ್ಯಾಪಾರಸ್ಥರು ಮಳಿಗೆ ಪಡೆದಿರುವವರು ವ್ಯಾಪಾರಕ್ಕೆ ಬರಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇಲ್ಲಿ ಪೂರ್ಣವಾಗಿ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಯಾವ ಯಾವ ಕ್ರಮ ಕೈಗೊಂಡಿದೆ; ಎಂದು ಪೂರ್ಣಗೊಳ್ಳುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಅಂಗಡಿಗಳನ್ನು ಕಟ್ಟಿದ ವ್ಯಾಪಾರಸ್ಥರು ತಕ್ಷಣ ಅಲ್ಲಿಗೆ ವಹಿವಾಟನ್ನು ಸ್ಥಳಾಂತರಿಸಬೇಕು ಮತ್ತು ಕಟ್ಟಡಗಳನ್ನು ಅಪೂರ್ಣವಾಗಿ ನಿರ್ಮಿಸಿದವರು 6 ತಿಂಗಳೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಇ) ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಒದಗಿಸಲಾಗಿದೆ. ಮುಂದುವರೆದ ಸೌಕರ್ಯಗಳ ನಿರ್ವಹಣೆ ಮತ್ತು ಅಭಿವೃದ್ಧಿ ನಿರಂತರ ಪ್ರಕ್ರಿಯೆಯಾಗಿರುತ್ತದೆ.

ಅನುಬಂಧ

ಬಂಡೀಪಾಳ್ಯ ಪ್ರಾಂಗಣದಲ್ಲಿ ಒದಗಿಸಿರುವ ಸೌಲಭ್ಯಗಳ ವಿವರ

ಹರಾಜುಕಟ್ಟೆಗಳು - 8 ಸಂಖ್ಯೆ

ತೆರೆದ ಹರಾಜುಕಟ್ಟೆಗಳು - 2 ಸಂಖ್ಯೆ

ಗೋದಾಮುಗಳು - 58 ಬಿ ಬ್ಲಾಕಿನಲ್ಲಿ